4) 1985-86

Name of the Villages: 1) Hirur 2) Hallur 3) Bandarahalli 4. Teradakoppa 5. Yakkeri 6. Karavinkoppa 7. Katmali and Tonda 8. Goravanko 9. Vatnal 10. Asundi 11. Mugali 12. Hitanagi 13. Shingarayappa 14 Hirekumbi 15. Haralapur 16. Murgod 17. Karimanir 18 Dundankoppa 19. Hoolikere-Tanda 20. Ramapura-Tandai 21. Inchal 22 Mabnur 23. Shrirangapur 24. Subapur 25. Benakatt 26. Haralakatti 27. Govankoppa (I) 28. Tavanalageri 29. Kadiwad 30. Hire-Ulligeri 31. Rainapur 32. Yadahalli 33. Shindogi 34. Soundatti 35. Mugalihal 36 Itnal 37 Teggihal 38. Melliker i 39. Takkabal 40. Hooli 41. Hosur 42. Murakumbi 43. Karalakatti 44. Mullur 45 Badl and Tanda 46. Katral 47. Sogal 48 Kagihal 49. Ahamatti 50. Chachadi 51. Mutawad 52. Harugoppa 53. Yenagi 54. Munoli 55. Arutagal 56. Aalaki 57. Madaslur 58. Malagali 59. Somapur 60. Yarazarvi 61. Kadabi 62. Shivapur 63. Kurubagatti 64. Yaraganvi 65. Yaragatti 66. Budigoppa 67. Gudamakeri 68. Aladkatti 69. Tallur

5) 1986-87

Name of the villages: 1) Hirur 2) Hallur 3) Bhandarahalli 4) Teradakoppa 5) Yakkeri 6) Jakabal 7) Kurvinkoppa 8) Katamalli 9) Katamalli-Tanda 10) Goravanakoppa 11) Vatnal 12) Asundi Mugali 14) Hittangi 15) Hire-Kumbi 16. Harlapur 17. Mabanur 18. Shrirangapur 19. Subapur 20. Benakatti 21. Haralakatti 22. Govanakoppa (i) 23. Singaregoppa 24. Murgod 25. Karimani 26. Dundakoppa 27. Hoolikeri-Tanda 28. Ramapur-Tanda 29. Ingalgi 30. Inchal 31. Kodliwad 32. Hire-Ulligeri 33. Soppadla 34. Korekoppa

ಬೆಂಗಳೂರು ಮಹಾನಗರಪಾಲಿಕೆಗೆ ಎರವಲಾಗಿ ಪಡೆದ ಅಧಿಕಾರಿಗಳ ಬಗ್ಗೆ

೧೮೦೩. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ, ಆಹಾರ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮುನಿಸಿಪಲ್ ನಗರಸಭೆಯ ಎಲ್ಲಾ ಇಲಾಖೆಗಳಿಂದ ಆಡಳಿತ ವರ್ಗಕ್ಕೆ ಎರವಲಾಗಿ ವರ್ಗಾಯಿಸಲ್ಪಟ್ಟ ಸರ್ಕಾರದ ಅಧಿಕಾರಿಗಳ ಸಂಖ್ಯೆ ಎಷ್ಟು ಮತ್ತು ಗರಿಷ್ಠ ಎಷ್ಟು ವರ್ಷಗಳವರೆಗೆ ಇರಬಹುದು,

ಆ) ಅಂಥವರು ಎಷ್ಟು ವರ್ಷಗಳಿಂದ ನಗರಸಭೆಯಲ್ಲಿಯೇ ಕೆಲಸ ಮಾಡಿಕೊಂಡು ಇದ್ದಾರೆ,

ಇ) ನಗರಸಭೆಯಲ್ಲಿ ಎಷ್ಟು ಜನರ ಸೇವೆಯನ್ನು ಅಲ್ಲಿಯೇ ಖಾಯಂ ಮಾಡಲಾಗಿದೆ,

ಈ) ಪುನಃ ಅವರುಗಳ ಸೇವೆಯನ್ನು ಸರ್ಕಾರಕ್ಕೆ ವಾಪಸು ಪಡೆಯಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಸಚಿವರು.)—

ಅ) ೬೮ ಅಧಿಕಾರಿಗಳು. ಗರಿಷ್ಠ ೫ ವರ್ಷ.

ಆ) ೧ ರಿಂದ ೬ ವರ್ಷ.

ಇ) ಇಬ್ಬರೂ.

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಬಿಲ್ಡಿಂಗ್ ಬೈಲಾಗಳ ಬಗ್ಗೆ

೧೮೦೭ ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಲಿ ಚಾಲ್ತಿಯಲ್ಲಿರುವ ಬೆಂಗಳೂರು ನಗರಸಭೆಯ ಕಟ್ಟಡ ಬೈಲಾಗಳು ಮತ್ತು ಜೋನಲ್ ರೆಗ್ಯೂಲೇಷನ್‌ಗಳು ಪಬ್ಲಿಕ್ ಮತ್ತು ಸೆಮಿ ಪಬ್ಲಿಕ್ ಬಿಲ್ಡಿಂಗ್‌ಗಳಿಗೆ ಸ್ಯೂಲು ಕಟ್ಟಡಗಳನ್ನು ಕಟ್ಟಲು ತೊಂದರೆಯಾಗಿದೆಯೆನ್ನುವುದು ಸರ್ಕಾರದಪರ ಗಮನಕ್ಕೆ ಬಂದಿದೆಯೇ,

ಆ) ಸುತ್ತಲೂ ೪೦ ಅಡಿಗಳಷ್ಟು ತೆರವು ಜಮೀನನ್ನು ಬಿಟ್ಟು ಕಟ್ಟಲು ಜಮೀನಿನಂಗಳು ನಗರದಲ್ಲಿ ಸಿಗುವುದು ಬಹಳ ವಿರಳವಾಗಿದ್ದು ಶಾಲಾ ಕಟ್ಟಡಗಳನ್ನು ಕಟ್ಟಲು ಅಸಾಧ್ಯವಾಗಿರುವುದು ಸರ್ಕಾರದಪರ ಗಮನಕ್ಕೆ ಬಂದಿದೆಯೇ,

ಇ) ಈ ನ್ಯೂನತೆಯನ್ನು ಸರಿಮಾಡಿ ಮೊದಲಿನಂತೆ ೬ ಅಡಿ ಅಥವಾ ೧೦ ಅಡಿ ತೆರವು ಜಮೀನನ್ನು ನಿವೇಶನದ ಸುತ್ತ ಬಿಡಲು ತಿದ್ದುಪಡಿ ಮಾಡಿ ಶಾಲಾ ಕಟ್ಟಡಗಳನ್ನು ಕಟ್ಟಲು ತಿದ್ದುಪಡಿ ಮಾಡಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ಸರ್ಕಾರವು ಇದರಲ್ಲಿ ನ್ಯೂನತೆ ಇದೆ ಎಂದು ಪರಿಗಣಿಸಿಲ್ಲ. ಆದ್ದರಿಂದ ತಿದ್ದುಪಡಿಯ ಅವಶ್ಯಕತೆ ಇಲ್ಲ.

ಪುರಸಭೆಗಳಿಗೂ ಅಧಿಕಾರ ವಿಕೇಂದ್ರೀಕರಣದ ಬಗ್ಗೆ

೧೯೨೦ ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯತಿಗಳಂತೆ ಪುರ ಹಾಗೂ ನಗರಸಭೆ ಅಧಿಕಾರ ವಿಕೇಂದ್ರೀಕರಣ ಮಾಡುವುದು ಸರ್ಕಾರದವರ ಗಮನದಲ್ಲಿದೆಯೇ,

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಹಾಗೂ ಆಹಾರ ಮಂತ್ರಿಗಳು).—

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸರ್ಕಾರ ಅಂತಿಮ ನಿರ್ಣಯ ತೆಗೆದುಕೊಂಡ ಮೇಲೆ.